ಗುರುತಿಸುವುದು ನಿಮ್ಮ ಬರವಣಿಗೆಯ ಮುಖ್ಯ ಕಾಳಜಿಗಳಲ್ಲಿ ಒಂದು. ಈ ಬದಲಾವಣೆಯಲ್ಲಿ ಬೌದ್ಧಿಕತೆ ಮತ್ತು ಭಾವುಕತೆಗಳ ನಡುವಿನ ಸಂಘರ್ಷವನ್ನ ನೀವು ಹೇಗೆ ಅರ್ಥೈಸುತ್ತೀರಿ?

**ವೀಣಾ:** ಹೆಣ್ಣಿನ ಮನೋಭಾವದಲ್ಲಿ ಬೌದ್ಧಿಕ ಮತ್ತು ಭಾವನಾತ್ಮಕ ನೆಲೆಗಳಲ್ಲಿ ಬಹಳವೇನೂ ವ್ಯತ್ಯಾಸವಿಲ್ಲ ಅಂತ ನನಗನ್ನಿಸುತ್ತದೆ. ಗಂಡಸಿನ ವಿಷಯ ಹಾಗಲ್ಲ. ಅವನ ಬುದ್ಧಿಗೆ ಸಂಬಂಧಪಟ್ಟ ವಿಷಯಗಳೇ ಬೇರೆ, ಭಾವನೆಗಳಿಗೆ ಸಂಬಂಧಪಟ್ಟ ವಿಷಯಗಳೇ ಬೇರೆ. ಈ ಎರಡರ ನಡುವೆ ಅವ್ಯಕ್ತ ಅಂತರವನ್ನ ಕಾಯ್ದುಕೊಳ್ಳುವುದಷ್ಟೇ ಅಲ್ಲ, ತನಗೆ ಬೇಕಾದ ಹಾಗೆ ಬದಲಾವಣೆಗಳನ್ನು ಕೂಡ ಮಾಡಿಕೊಳ್ಳಬಲ್ಲ. ಆದರೆ ಹೆಣ್ಣು ಬುದ್ಧಿಯೊಂದಿಗೆ ಭಾವವನ್ನು ಕಲೆಸಿಕೊಂಡೇ ಇರುತ್ತಾಳೆ. ಇದಕ್ಕೆ ಅಪವಾದಗಳು ಬಹಳ ಕಡಿಮೆ ಅನ್ನಿಸುತ್ತದೆ. ಇಂತಹ ಅವಳ ಮನೋವಿನ್ಯಾಸ ಕಾಲದಿಂದ ಕಾಲಕ್ಕೆ ಬದ್ಲಾಗುತ್ತಾ ಇರುತ್ತದೆ. ಇದು ಅವಳ ಒಳಗಿನ ಸ್ಥಿತ್ಯಂತರವೂ ಆಗಿರಬಹುದು, ಹೊರಗಿನ ಸನ್ನಿವೇಶಗಳ ಕಾರಣಕ್ಕೂ ಹೌದೇನೋ.

**ಆಶಾ:** ಹಾಗಿದ್ದರೆ, ಇದನ್ನ ಹೀಗೆ ಹೇಳೋಣವೆ? ಹೆಣ್ಣಿನ ಮನೋಭೂಮಿಕೆಯೇ ಅತ್ಯಂತ ಶಕ್ತವಾದುದು. ಬುದ್ಧಿಭಾವಗಳ ವಿದ್ಯುದಾಲಿಂಗನದ, ಅಖಂಡತೆಯ ನೆಲೆಯನ್ನು ಪ್ರಯೋಗಿಸುವ, ಅದಕ್ಕೆ ಅಧಿಕೃತತೆಯನ್ನ ಪಡೆಯುವ ಪ್ರಯತ್ನವೇ ಇಂದಿನ ತುರ್ತು ಅಂತ ಹೇಳಬಹುದಲ್ವಾ?

**ವೀಣಾ:** ಇದು ಯಾವಾಗಲೂ ಏರುದಾರಿಯ ಪಯಣ ಅನ್ನಿಸುತ್ತದೆ ನನಗೆ. ಆಶಾ, ಹಾಗೆ ನೋಡಿದರೆ ವಿಮರ್ಶೆ ನಿಷಿದ್ಧವೆಂದೂ ಕರೆಯಬಹುದಾದ, ಮಹಿಳೆಯರೂ ಇದು ತಮ್ಮದಲ್ಲ ಅಂತಲೇ ಸಾಮಾನ್ಯವಾಗಿ ತಿಳಿದ ಕ್ಷೇತ್ರ. ನಿಮಗೆ ಇದರಲ್ಲಿ ಹ್ಯಾಗೆ, ಏಕೆ ಆಸಕ್ತಿ ಮೂಡಿತು?

**ಆಶಾ:** ಈಗ ಹಿನ್ನೋಟದಲ್ಲಿ ನೋಡೋವಾಗ, ಇದೊಂದು ರೋಚಕವಾದ ಪ್ರಯಾಣದ ಹಾಗೆ ಕಾಣಿಸುತ್ತದೆ. ನಾನಿನ್ನೂ ಹೈಸ್ಕೂಲಿನಲ್ಲಿರುವಾಗಲೇ ನನ್ನ ತಂದೆ, 'ಯಾವುದಾದರೂ ನಾಟಕ ನೋಡಿ ಬಂದರೆ, ಕೂತು ಅದರ ಬಗ್ಗೆ ಏನಾದ್ರೂ ಬರಿ' ಅಂತ ಹೇಳ್ತಾ ಇದ್ದರು. ಆಮೇಲೆ ಅದನ್ನ ನನ್ನ ಜೊತೇಲಿ ಚರ್ಚೇನೂ ಮಾಡ್ತಾ ಇದ್ದರು. ತಮಾಷೆ ಅಂದ್ರೆ, ಒಂದು ಮಾದರಿ ಲೇಖನಾನೂ ಅವರೇ ಬರೆಸಿದ್ರು. ಆ ಲೇಖನದಲ್ಲಿ, 'ನಾಲ್ಕಾಣೆ ಪ್ರಭುಗಳನ್ನು ಮೆಚ್ಚಿಸಲು' ಅಂತ ಬರೆಸ್ದಾಗ, ಅವರು ಯಾರು ಅಂತ ನಾನು ಕೇಳಿ, ಅವರು ಅದಕ್ಕೊಂದು ಪಾಠ ಮಾಡಿ... ಹೀಗೆ ವಿಮರ್ಶೆ ಅಂದ್ರೆ ಏನು ಅಂತ ಗೊತ್ತಾಗೋಕೆ ಮುಂಚೇನೆ ವಿಮರ್ಶೆ ಶುರು ಮಾಡಿದ್ದೆ. ಆಮೇಲೆ, ನನ್ನ ಪಿಎಚ್.ಡಿ.ಗೆ ನಾನು ತೊಗೊಂಡಿದ್ದೂ ವಿಮರ್ಶೆಯ ವಿಷಯವನ್ನೇ. ನನಗೆ ಮಾರ್ಗದರ್ಶನ ಮಾಡಿದ ಡಿ.ಆರ್. ನಾಗರಾಜ್ ಕೂಡ ವಿಮರ್ಶಕರೇ. ನನ್ನ ಮೊದ ಮೊದಲ ಬರವಣಿಗೆಗಳನ್ನ ನೋಡಿದ ಅವರು, 'ಒಳ್ಳೆ ವಿಮರ್ಶಕರಾಗಬಹುದು ಕಣ್ರೀ ನೀವು' ಅಂತ ಹೇಳಿದರು. ನಿಧಾನವಾಗಿ ನನಗೆ ವಿಮರ್ಶೆಯೇ ನನ್ನ ಕ್ಷೇತ್ರ ಅನ್ನೋದು ಖಚಿತವಾಗ್ತಾ ಹೋಯ್ತು. ಮುಂದೆ ಸ್ತ್ರೀವಾದ ನನ್ನ ಆಸಕ್ತಿಯ ಕ್ಷೇತ್ರವಾದಾಗ ಇದು ನನ್ನ ಆಯ್ಕೆ ಮತ್ತು ಆದ್ಯತೆ ಎರಡೂ ಆಯ್ತು.

**ವೀಣಾ:** ನನಗೆ ನಿಜಕ್ಕೂ ಇದೊಂದು ತುಂಬಾ ಮುಖ್ಯವಾದ ಸಂಗತಿಯ ಹಾಗೆ ಕಾಣಿಸುತ್ತೆ. ಕನ್ನಡದಲ್ಲಿ ಸ್ತ್ರೀವಾದಿ ಸಾಹಿತ್ಯ ಮತ್ತು ವಿಮರ್ಶೆ ಒಂದಕ್ಕೊಂದು ಪೂರಕವಾಗಿ ಬೆಳೆದು ಬಂದವು. ವಿಜಯಾ ದಬ್ಬೆ ಮತ್ತು ಸುಮಿತ್ರಾ ಬಾಯಿ ಕನ್ನಡದಲ್ಲಿ ತಾತ್ವಿಕತೆಯನ್ನು ಬಹಳ ಗಟ್ಟಿಯಾಗೇ ಹಾಕಿದ್ರು.

**ಆಶಾ:** ಖಂಡಿತಾ, ಇವತ್ತಿಗೆ ನನಗೆ ಪ್ರಾಮಾಣಿಕವಾಗಿ ಮತ್ತು ವಸ್ತುನಿಷ್ಠವಾಗಿ ನೋಡೋವಾಗಲೂ ನನಗೆ, ಭಾರತದ ಮಟ್ಟದಲ್ಲೇ ಸ್ತ್ರೀವಾದಿ ಚಿಂತನೆಯಲ್ಲಿ ಕನ್ನಡದ ಚಿಂತನೆ ಮುಂಚೂಣಿಯಲ್ಲಿದೆ ಅನ್ನಿಸುತ್ತೆ. ಸ್ತ್ರೀವಾದವನ್ನ ಲೋಕಮೀಮಾಂಸೆಯಾಗಿ ಕಟ್ಟಿ